	ಡಿಪೋ	ಬಸ್‌ಗಳ ಸಂಖ್ಯೆ
1.	ತುಮಕೂರು	110
2.	ಕುಣಿಗಲ್	81
3.	ತುರುವೇಕೆರೆ	76
4.	ಶಿರಾ	30
	ಒಟ್ಟು	**297**

ಆ) ಕಳೆದ 3 ವರ್ಷಗಳಲ್ಲಿ ಡಿಪೋವಾರು ಗಳಿಸಿದ ಆದಾಯದ ವಿವರ ಈ ಕೆಳಗೆ ನೀಡಲಾಗಿದೆ:

ಕ್ರ. ಸಂ.	ಡಿಪೋ	01–02	02–03	03–04
1.	ತುಮಕೂರು	1701.17	1775.85	1757.62
2.	ಕುಣಿಗಲ್	1153.25	1233.24	1258.44
3.	ತುರುವೇಕೆರೆ	816.42	878.80	961.46
4.	ಶಿರಾ	–	81.08	381.53
	ಒಟ್ಟು	**3670.84**	**3968.97**	**4359.05**

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರು ಜಿಲ್ಲೆಯ ರಾಷ್ಟ್ರೀಕೃತವಾದ ವಲಯದಲ್ಲಿರುವ ಎಲ್ಲಾ 391 ಗ್ರಾಮಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಿದೆ.

ಈ) 9 ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಲಾಗಿದೆ.

579(777) : ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಬೆಳ್ಳಾವಿ ಕ್ಷೇತ್ರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಉದ್ದ ಎಷ್ಟು? (ಕಿಮೀ.ಗಳಲ್ಲಿ) ಈ ರಸ್ತೆಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರ ನಿಗದಿ ಮಾಡಿದ್ದ ಹಣ ಎಷ್ಟು ಅದರಲ್ಲಿ ಖರ್ಚು ಮಾಡಿರುವ ಹಣ ಎಷ್ಟು (ವರ್ಷವಾರು ವಿವರಗಳನ್ನು ಒದಗಿಸುವುದು);

ಆ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿರುವ ಒಟ್ಟು ಸೇತುವೆಗಳ ಸಂಖ್ಯೆ ಎಷ್ಟು? ಅವು ಯಾವುವು?

ಇ) ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳು ಯಾವುವು? ಇವುಗಳಲ್ಲಿ ಪುನರ್‌ನಿರ್ಮಾಣವಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ಇದಕ್ಕಾಗಿ ಕಳೆದ 3 ವರ್ಷಗಳಲ್ಲಿ ಮೀಸಲಿಟ್ಟಿದ್ದ ಹಣ ಮತ್ತು ಖರ್ಚು ಮಾಡಿರುವ ಹಣ ಎಷ್ಟು;

ಈ) ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಿಗೆ ಹಾಕಿದ್ದ ಡಾಂಬರು ಕಿತ್ತು ಹೋಗಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದಲ್ಲಿ, ಈ ರಸ್ತೆಗಳಿಗೆ ಡಾಂಬರು ಹಾಕಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುಮಕೂರು ಜಿಲ್ಲೆ ಬೆಳ್ಳಾವಿ ಕ್ಷೇತ್ರ ವ್ಯಾಪ್ತಿಯು 4 ತಾಲ್ಲೂಕುಗಳಲ್ಲಿ ಹರಡಿಕೊಂಡಿದ್ದು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ 31.58 ಕಿಮೀಗಳಷ್ಟು ಉದ್ದದ ರಾಜ್ಯ ಹೆದ್ದಾರಿಯೂ ಮತ್ತು 191.90 ಕಿಮೀಗಳಷ್ಟು ಉದ್ದದ ಜಿಲ್ಲಾ ಮುಖ್ಯ ರಸ್ತೆಗಳೂ ಇರುತ್ತವೆ.

ಈ ರಸ್ತೆಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ನಿಗದಿ ಮಾಡಿದ್ದ ಹಾಗೂ ಖರ್ಚು ಮಾಡಿರುವ ವಿವರ ಹೀಗಿದೆ.

ಸಂ.	ವರ್ಷ	ನಿಗದಿ ಮಾಡಿದ ಹಣ ಲಕ್ಷ ರೂ.	ಖರ್ಚು ಮಾಡಿರುವ ಹಣ ಲಕ್ಷ ರೂ.
1.	2001-02	197.00	136.35
2	2002-03	111.50	144.84
3.	2003-04	311.82	109.75
4.	2004-05	-	61.22
	ಒಟ್ಟು	**620.32**	**452.36**

ಆ) ತುಮಕೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟಾರೆ 3747 ಸೇತುವೆಗಳಿದ್ದು, ಇದರಲ್ಲಿ ರಾಜ್ಯ ಹೆದ್ದಾರಿಗಳಲ್ಲಿ 912 ಸಂಖ್ಯೆ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ 2835 ಸಂಖ್ಯೆಯಷ್ಟು ಸೇತುವೆಗಳಿರುತ್ತವೆ.

ಇ) ತುಮಕೂರು ಜಿಲ್ಲೆಯಲ್ಲಿ ಒಟ್ಟಾರೆ 20 ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳನ್ನು ಗುರುತಿಸಿದ್ದು, ಇವುಗಳಲ್ಲಿ ಈಗಾಗಲೇ 13 ಸೇತುವೆಗಳನ್ನು ವಿವಿಧ ಶೀರ್ಷಿಕೆಯಡಿ ಪುನರ್ ನಿರ್ಮಾಣಕ್ಕೆ ಕ್ರಮಕೈಗೊಂಡಿದೆ. ಇವುಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಒಟ್ಟಾರೆ ರೂ.292.44 ಲಕ್ಷಗಳನ್ನು ನಿಗಧಿಪಡಿಸಿದ್ದು, ಇದಕ್ಕೆಮರಾಗಿ ಪ್ರಸಕ್ತ ವರ್ಷದವರೆಗೆ ಒಟ್ಟಾರೆ ರೂ.214.24 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಉಳಿದ 7 ಸೇತುವೆ ಕಾಮಗಾರಿಗಳನ್ನು ಪುನರ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಹೀಗಿರುವ ಶಿಥಿಲಾವಸ್ಥೆಯಲ್ಲಿದ್ದ ಸೇತುವೆಗಳ ಪಟ್ಟಿಯನ್ನು ಅನುಬಂಧ-1 ಮತ್ತು 2ಗಳಲ್ಲಿ ನೀಡಿದೆ.

ಈ) ಬಂದಿದೆ.

ಉ) ತುಮಕೂರು ಜಿಲ್ಲೆಯಲ್ಲಿನ 13 ವಿಧಾನ ಸಭಾಕ್ಷೇತ್ರಗಳಲ್ಲಿ ಹರಡಿಕೊಂಡಿರುವ ಜಿಲ್ಲಾ ಮುಖ್ಯ ರಸ್ತೆಗಳಲ್ಲಿನ ಡಾಂಬರು ಮೇಲ್ಪದರನಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಒಟ್ಟಾರೆ ರೂ.168.90 ಲಕ್ಷ ಮೊತ್ತದ ಕಾರ್ಯಕ್ರಮವನ್ನು ರೂಪಿಸಿದ್ದು,

ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಇದೇ ರೀತಿ ರಾಜ್ಯ ಹೆದ್ದಾರಿಗಳಿಗೂ ಸಹ ಕಾರ್ಯಕ್ರಮವನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

580(778) : ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಮತ್ತು ಬೆಂಗಳೂರು ನಡುವೆ ಅನಧಿಕೃತವಾಗಿ ಎಷ್ಟು ಖಾಸಗಿ ವಾಹನಗಳು ಪ್ರಯಾಣಿಕರನ್ನು ಪ್ರತಿ ದಿನ ಸಾಗಿಸುತ್ತಿವೆ; (ವಾಹನಗಳ ದರ್ಜೆವಾರು ಮಾಹಿತಿ ಒದಗಿಸುವುದು);

ಆ) ಖಾಸಗಿ ವಾಹನದವರು ಅನಧಿಕೃತವಾಗಿ ಪ್ರಯಾಣಿಕರನ್ನು ಸಾಗಿಸುತ್ತಿದ್ದುದ್ದರಿಂದ ಪ್ರತಿ ತಿಂಗಳು ಸರ್ಕಾರಕ್ಕೆ ಆಗುತ್ತಿರುವ ಆರ್ಥಿಕ ನಷ್ಟ ಎಷ್ಟು;

ಇ) ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಬಸ್‌ಗಳನ್ನು ಓಡಿಸದಿರುವುದಕ್ಕೆ ಕಾರಣಗಳೇನು;

ಈ) ಪ್ರಯಾಣಿಕರನ್ನು ಅನಧಿಕೃತವಾಗಿ ಸಾಗಿಸುತ್ತಿರುವ ಖಾಸಗಿ ವಾಹನ ಮಾಲೀಕರ ವಿರುದ್ಧ ಕಳೆದ 3 ವರ್ಷಗಳಲ್ಲಿ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತುಮಕೂರು-ಬೆಂಗಳೂರು ನಡುವೆ 42 ಒಪ್ಪಂದ ಕರಾರು ವಾಹನಗಳು ಅಧಿಕೃತವಾಗಿ ರಹದಾರಿ ಪಡೆದು ಸಂಚರಿಸುತ್ತಿವೆ, ರಹದಾರಿ ಪಡೆಯದೇ ಅನಧಿಕೃತವಾಗಿ ಸಂಚರಿಸುತ್ತಿರುವ ವಾಹನಗಳನ್ನು ತಪಾಸಿಸಿ, ಅವುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರಿನಿಂದ ಬೆಂಗಳೂರು ಹಾಗೂ ಬೆಂಗಳೂರಿನಿಂದ ತುಮಕೂರಿನವರೆಗೆ 418 ಟ್ರಿಪ್‌ಗಳನ್ನು ಆಚರಣೆ ಮಾಡುತ್ತಿದೆ. ಸದರಿ ಸಾರಿಗೆಗಳು ಸದ್ಯದ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿರುತ್ತದೆ.

ಈ) 1,747 ಮಜಲು ವಾಹನಗಳು ಮತ್ತು 1,061 ಮ್ಯಾಕ್ಸಿಕ್ಯಾಬ್‌ಗಳನ್ನು ತಪಾಸಣೆ ಮಾಡಲಾಗಿದ್ದು, ಈ ಪೈಕಿ 533 ಮಜಲು ವಾಹನಗಳು ಮತ್ತು 1061 ಮ್ಯಾಕ್ಸಿಕ್ಯಾಬ್‌ಗಳನ್ನು ವಿರುದ್ಧ ಪ್ರಕರಣವನ್ನು ದಾಖಲಿಸಿ ಮೋಟಾರು ವಾಹನ ಕಾಯ್ದೆ 1988ರ ಅಡಿ 200ರಡಿಯಲ್ಲಿ ರೂ.29,25,397/-ಗಳ ದಂಡ ವಸೂಲಿ ಮಾಡಲಾಗಿದೆ.